# ಸುದ್ದಿ ತಿರುಚುವ ಮಾಧ್ಯಮಗಳು




- "ತಥ್ಯಗಳನ್ನು ಪರಿಶೀಲಿಸದೆಯೆ ಸರಸಂಘಚಾಲಕರ ಹೇಳಿಕೆಗಳ ಬಗ್ಗೆ ವಿವಾದವೆಬ್ಬಿಸುವ ಪ್ರಯತ್ನಗಳನ್ನು ಬಿಟ್ಟು ಮಾಧ್ಯಮಗಳು ಅವರ ಹೇಳಿಕೆಗಳನ್ನು ಸರಿಯಾದ ರೀತಿಯಲ್ಲಿ ಪ್ರಕಟಿಸಬೇಕು ಕಳೆದ ಕೆಲವು ದಿನಗಳಿಂದ ಸರಸಂಘಚಾಲಕರ ಹೇಳಿಕೆಗಳ ಕುರಿತು ಮಾಧ್ಯಮಗಳು ಅನಪೇಕ್ಷಿತ ವಿವಾದಗಳನ್ನು ಎಬ್ಬಿಸುತ್ತಿವೆ. ಕೆಲವು ವಾಹಿನಿಗಳು ಮತ್ತು ವೃತ್ತಪತ್ರಿಕೆಗಳು ಎಚ್ಚರಿಕೆ ವಹಿಸದೆ, ಅತ್ಯುತ್ಸಾಹ ಮತ್ತು ಹೊಣೆಗೇಡಿತನದ ರೀತಿಯಲ್ಲಿ ಇದನ್ನು ಮಾಡುತ್ತಿರುವುದು ವಿಷಾದನೀಯ. ಸರಸಂಘಚಾಲಕರ ಸಿಲ್ಚರ್‌ನ ಹೇಳಿಕೆ ಹಾಗೂ ವಿಶೇಷವಾಗಿ ಜನವರಿ 6ರ ಇಂದೋರ್‌ನ ಭಾಷಣದ ಕುರಿತಾಗಿ ನಡೆದ ಚರ್ಚೆಯು ಇದಕ್ಕೆ ಉದಾಹರಣೆಯಾಗಿದೆ. ಸತ್ಯಗಳನ್ನು ಪರಿಶೀಲಿಸದೆಯೆ ಈ ರೀತಿಯ ಅನುಚಿತ ವ್ಯವಹಾರ ಮಾಡದಿರಿ ಎಂದು ಮಾಧ್ಯಮಗಳ ಮಿತ್ರರನ್ನು ವಿನಂತಿಸುತ್ತೇವೆ."

  **–ಡಾ. ಮನಮೋಹನ್ ವೈದ್ಯ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಅ.ಭಾ. ಪ್ರಚಾರ ಪ್ರಮುಖ್**

- ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್‌ರ ಹೇಳಿಕೆಯನ್ನು ತಪ್ಪಾಗಿ ವರದಿ ಮಾಡಲಾಗಿದೆ ಎಂಬ ಸಂಗತಿ ಗಮನಕ್ಕೆ ಬಂದಿದೆ. ಟ್ವಿಟ್ಟರ್ ಮೂಲಕ ಬಂದ ವಾಸ್ತವ ಅಂಶಗಳನ್ನು ಪರಿಶೀಲಿಸಿದೆ, ಹಾಗಾಗಿ ಈ ಸುದ್ದಿ (CNN-IBN ಭಾಗವತ್ ಕುರಿತು ಪ್ರಕಟಿಸಿದ್ದ ವರದಿಯನ್ನು ಉಲ್ಲೇಖಿಸುತ್ತ) ಸತ್ಯವಲ್ಲ.

  **– ಚೇತನ್ ಭಗತ್, ಅಂತರರಾಷ್ಟ್ರೀಯ ಖ್ಯಾತಿಯ ಬರಹಗಾರ**

- ಅತಿಯಾದ ನಗರೀಕರಣ ಹಾಗೂ ನಗರದ ಜೀವನ ಶೈಲಿಯಿಂದಾಗಿ ನಗರ ಪ್ರದೇಶ ಹಾಗೂ ಮೆಟ್ರೋಪಾಲಿಟನ್ ನಗರಗಳಲ್ಲಿ ಅತ್ಯಾಚಾರದ ಸಂಖ್ಯೆ ಹೆಚ್ಚಿದೆ. ಆರೆಸ್ಸೆಸ್‌ನ ಮೋಹನ್ ಭಾಗವತ್ ಹೇಳಿಕೆಯಲ್ಲಿ ತಪ್ಪಿಲ್ಲ. ಅವರ ಅಭಿಪ್ರಾಯ ತಪ್ಪಾಗಿ ಅರ್ಥೈಸಬಾರದು.

  **– ಆಶೀಶ್ ನಂದಿ, ಖ್ಯಾತ ಸಾಮಾಜಿಕ ಚಿಂತಕ (ತೆಹೆಲ್ಕಾ ವರದಿ)**

- 'ಮಹಿಳೆಯರ ಸಬಲೀಕರಣ ಮತ್ತು ಮಹಿಳೆಯರಿಗೆ ಗೌರವ ನೀಡುವುದು ಆರೆಸ್ಸೆಸ್ ಮುಖ್ಯ ಸಿದ್ಧಾಂತವಾಗಿದೆ. ರಾಷ್ಟ್ರಸೇವಿಕಾ ಸಮಿತಿ, ವಿದ್ಯಾಭಾರತಿ, ವನವಾಸಿ ಕಲ್ಯಾಣ ಸೇರಿದಂತೆ ಸಂಘ ಪರಿವಾರದ ಎಲ್ಲಾ ಸಂಘಟನೆಗಳೂ ಮಹಿಳಾ ಸಬಲೀಕರಣಕ್ಕೆ ಅತ್ಯಂತ ಹೆಚ್ಚು ಒತ್ತು ನೀಡಿ ಕೆಲಸ ಮಾಡುತ್ತಿದೆ. ಭಾಗವತ್‌ಜೀಯವರ ಹೇಳಿಕೆಯನ್ನು ಅನಗತ್ಯವಾಗಿ ಹಾಗೂ ತಪ್ಪಾಗಿ ಟೀಕಿಸಲಾಗುತ್ತಿದೆ'.

  **– ರವಿಶಂಕರ ಪ್ರಸಾದ್, ಬಿಜೆಪಿಯ ಮುಖ್ಯ ವಕ್ತಾರ**

- ಇತರ ಪತ್ರಿಕೆಗಳಂತೆ, 'ಮಲಯಾಳ ಮನೋರಮಾ' ಕೂಡಾ ನ್ಯೂಸ್ ಏಜೆನ್ಸಿಯಾದ ಪಿಟಿಐ ಕಳುಹಿಸಿದ್ದ ವರದಿಯನ್ನು ಯಥಾವತ್ ಪ್ರಕಟಿಸಿದ್ದೆವು. ಆ ಸುದ್ದಿಯ ಮೂಲ ಪಿಟಿಐ. ಇದೀಗ ಮೋಹನ್ ಭಾಗವತ್‌ರ ಮೂಲ ಭಾಷಣದ ಪೂರ್ಣ ಪಾಠವನ್ನು ಇವತ್ತು ಪ್ರಕಟಿಸುತ್ತಿದ್ದೇವೆ.

  **– ಭಾರತದ ಅತ್ಯಂತ ಹೆಚ್ಚು ಪ್ರಸಾರವುಳ್ಳ ಪ್ರಾದೇಶಿಕ ಪತ್ರಿಕೆ 'ಮಲಯಾಳ ಮನೋರಮಾ' ಪ್ರಧಾನ ಸಂಪಾದಕರ ಅಧಿಕೃತ ಪ್ರಕಟಣೆ** (ಭಾಗವತ್ ಭಾಷಣದ ವರದಿಯ ದೋಷ ಮನಗಂಡು ಭಾಷಣದ ಪೂರ್ಣ ಪಾಠವನ್ನು 10.1.2013ರಂದು ಪ್ರಕಟಿಸಿತ್ತು.)

**'ಟೈಮ್ಸ್ ನೌ' ಆಂಗ್ಲ ವಾರ್ತಾವಾಹಿನಿ ಮಾತ್ರ 'ಮೋಹನ್ ಭಾಗವತ್‌ರ ಹೇಳಿಕೆಯಲ್ಲಿ ಯಾವುದೇ ವಿವಾದಾಸ್ಪದ ಅಂಶಗಳಿಲ್ಲ, ಉಳಿದ ಮಾಧ್ಯಮಗಳು ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿವೆ' ಎಂದೇ ಸಮಯೋಚಿತ ವರದಿ ಮಾಡಿತ್ತು.**

## ನಾವೇನು ಮಾಡಬೇಕು...?

- ✓ ಸುದ್ದಿ ತಿರುಚಿ, ತಪ್ಪಾಗಿ ವರದಿ ಮಾಡುವ ಮಾಧ್ಯಮಗಳನ್ನು ಪ್ರತಿಭಟಿಸಿ, ಸತ್ಯ ಸಂಗತಿ ಜನರಿಗೆ ತಿಳಿಸಿ.
- ✓ ಪತ್ರಿಕೆಗಳ ವಾಚಕರ ವಾಣಿ/ಓದುಗರ ಪತ್ರ ವಿಭಾಗಕ್ಕೆ ಪತ್ರ ಬರೆಯಿರಿ.
- ✓ ಸುದ್ದಿ ತಿರುಚುವ ಮಾಧ್ಯಮಗಳ ವಿರುದ್ಧ ಮೊಕದ್ದಮೆ ಹೂಡಿ.
- ✓ ಆರೆಸ್ಸೆಸ್ ಕುರಿತ ಯಾವುದೇ ಸುದ್ದಿ–ಪ್ರಕಟಣೆಗಳಿಗಾಗಿ www.samvada.org ವೆಬ್‌ಸೈಟ್‌ಗೆ ಆಗ್ಗಾಗ್ಗೆ ಭೇಟಿ ನೀಡಿ

ಪ್ರಕಟಣೆ : ಜನಜಾಗೃತಿ ವೇದಿಕೆ, ಕರ್ನಾಟಕ, ನಂ. 55, ಯಾದವಸ್ಮೃತಿ, ಶೇಷಾದ್ರಿಪುರಂ, ಬೆಂಗಳೂರು–20

| | ಮೋಹನ್‌ಜೀ ಭಾಗವತ್ ಹೇಳಿದ್ದೇನು? | ಮಾಧ್ಯಮಗಳು ತಿರುಚಿದ್ದು ಹೇಗೆ? |
|---|---|---|
| ಜನವರಿ 1, 2013 ಸಿಲ್ಚಾರ್ | 'ವಿದೇಶೀ ಜೀವನ ಶೈಲಿಯ ಅಪಾರ ಪ್ರಭಾವ ಬೆಳೆಸಿರುವ ನಗರ ಕೇಂದ್ರಿತ – ಭೋಗ ಪ್ರಧಾನ ವ್ಯವಸ್ಥೆ – ಮಾನಸಿಕತೆಯಿಂದಾಗಿ ಅತ್ಯಾಚಾರ ಮೊದಲಾದ ಹಿಂಸಾತ್ಮಕ ಕೃತ್ಯಗಳು ಹೆಚ್ಚುತ್ತಿವೆ. ಭಾರತೀಯ ಮೌಲ್ಯಗಳು ಸ್ತ್ರೀಪರ ಗೌರವಯುತ ದೃಷ್ಟಿ ಹೊಂದಿದೆ. ಭಾರತೀಯ ಮೌಲ್ಯಗಳಿಂದ ದೂರ ಸರಿದಷ್ಟೂ ಹಿಂಸೆ ಕ್ರೌರ್ಯಗಳು ಹೆಚ್ಚುತ್ತಿವೆ.' | 'ಗ್ರಾಮೀಣ ಭಾರತದಲ್ಲಿ ಅತ್ಯಾಚಾರ ನಡೆಯುತ್ತಿಲ್ಲ' : ಆರೆಸ್ಸೆಸ್ ಮುಖ್ಯಸ್ಥ ಭಾಗವತ್ ★ ★ ★ <br> 'ಆಧುನಿಕತೆಯಿಂದಾಗಿ ಅತ್ಯಾಚಾರ ಹೆಚ್ಚಳ' : ಆರೆಸ್ಸೆಸ್ ಮುಖ್ಯಸ್ಥ ★ ★ ★ <br> 'ಅತ್ಯಾಚಾರಗಳು ಕೇವಲ ನಗರಗಳಲ್ಲಿ ನಡೆಯುತ್ತವೆ ಎಂದಿದ್ದಾರೆ ಭಾಗವತ್'. ★ ★ ★ |
| ಜನವರಿ 6, 2013 ಇಂದೋರ್ | 'ಪಾಶ್ಚಿಮಾತ್ಯ ವ್ಯವಸ್ಥೆಯಲ್ಲಿ ಪುರುಷ(ಪತಿ) ಮತ್ತು ಮಹಿಳೆ (ಪತ್ನಿ) ಇಬ್ಬರೂ ವಿವಾಹವನ್ನು ಒಂದು ಒಪ್ಪಂದ ಎಂದು ಭಾವಿಸುತ್ತಾರೆ. ಆದರೆ ಭಾರತದಲ್ಲಿ ವಿವಾಹವನ್ನು ಒಂದು ಪವಿತ್ರ ಸಂಬಂಧ ಎಂದು ಭಾವಿಸುತ್ತೇವೆ. ಇಲ್ಲಿ ಮಹಿಳೆಯರಿಗೆ ಅಪಾರ ಗೌರವವಿದೆ. ಪಾಶ್ಚಿಮಾತ್ಯ ವ್ಯವಸ್ಥೆಗಳ ಪ್ರಕಾರ ಮನೆಯ ಕೆಲಸ–ಚಟುವಟಿಕೆಗಳನ್ನು, ಪತಿಯ ಯೋಗಕ್ಷೇಮವನ್ನು ಪತ್ನಿ ನೋಡಿಕೊಂಡರೆ, ಪತ್ನಿಯ ಹಾಗೂ ಕುಟುಂಬದ ಅಗತ್ಯಗಳನ್ನು ಗಂಡ ಪೂರೈಸುತ್ತಾನೆ. ಈ ರೀತಿಯ ಪರಸ್ಪರ ಒಪ್ಪಂದಕ್ಕೆ ಅವರು ಒಪ್ಪಿರುತ್ತಾರೆ. ಒಂದು ವೇಳೆ ಒಪ್ಪಂದ ಉಲ್ಲಂಘನೆಯಾದಲ್ಲಿ ಪತಿ ಪತ್ನಿಯ (ಅಥವಾ ಪತ್ನಿ ಪತಿಯ) ಕೈಬಿಡುತ್ತಾರೆ.' (ಇದು ಪಾಶ್ಚಿಮಾತ್ಯ ವ್ಯವಸ್ಥೆಗೆ ಸಂಬಂಧಿಸಿ ಹೇಳಿದ್ದು). | 'ಮಾನಿನಿ ಮನೆಗೆಲಸಕ್ಕೆ ಮಾತ್ರ ಲಾಯಕ್ಕು'. –ಪ್ರಜಾವಾಣಿ <br> 'ಮಹಿಳೆ ಕೆಲಸಕ್ಕೇ ಹೋಗಬಾರದು! ಗಂಡ ದುಡಿಯಲು ಹೊರಗೆ ಹೋಗಬೇಕು. ಹೆಂಡತಿ ಮನೆಯಲ್ಲಿ ಕೆಲಸ ಮಾಡಿಕೊಂಡು ಇರಬೇಕು. ಯಾವುದೇ ಕಾರಣಕ್ಕೂ ಆಕೆ ಕೆಲಸಕ್ಕೆಂದು ಹೊರಗೆ ಹೋಗಬಾರದು.' – ಕನ್ನಡಪ್ರಭ <br> *'Woman is bound by contract to husband to look after him : RSS Chief.'* ***- Indian Express*** <br> *'Women should be just housewives & men the earning members : RSS Chief.'* ***- CNN-IBN*** <br> *'RSS Latest: Wives 'contractual' servants. Husbands are Gods.'* ***- Times of India*** |

## ಆರೆಸ್ಸೆಸ್ ಮುಖಂಡ ರಾಮ್‌ಮಾಧವ್ ಸ್ಪಷ್ಟೀಕರಣ

"ಆರೆಸ್ಸೆಸ್ ಸರಸಂಘಚಾಲಕ ಮೋಹನ್ ಭಾಗವತ್ ಅವರ ಅಭಿಪ್ರಾಯವನ್ನು ತಪ್ಪಾಗಿ ಬಿಂಬಿಸಲಾಗಿದೆ. 'ಪಾಶ್ಚಿಮಾತ್ಯ ವ್ಯವಸ್ಥೆಯಲ್ಲಿ ಪುರುಷ ಮತ್ತು ಮಹಿಳೆ ವಿವಾಹವನ್ನು ಒಂದು ಒಪ್ಪಂದ ಎಂದು ಭಾವಿಸುತ್ತಾರೆ. ಆದರೆ ಭಾರತದಲ್ಲಿ ವಿವಾಹವನ್ನು ಪವಿತ್ರ ಎಂದು ಭಾವಿಸುತ್ತಾರೆ. ಇಲ್ಲಿ ಮಹಿಳೆಗೆ ಅಪಾರ ಗೌರವವಿದೆ ಹಾಗೂ ಪುರುಷನಿಗೆ ಕೆಲ ಕೌಟುಂಬಿಕ ಜವಾಬ್ದಾರಿಗಳಿರುತ್ತವೆ' ಎಂದು ಅವರು ಹೇಳಿದ್ದರು. ಆದರೆ, ಭಾಗವತ್‌ರು ಭಾರತೀಯ ವಿವಾಹವನ್ನೇ ಒಪ್ಪಂದ ಎಂದು ಹೇಳಿ ದಂತೆ ಬಿಂಬಿಸಲಾಗಿದೆ. ಅವರ ಹೇಳಿಕೆಯನ್ನು ತಿರುಚಿ ತಪ್ಪಾಗಿ ಅರ್ಥೈಸಲಾಗಿದೆ. 'ಪಾಶ್ಚಿಮಾತ್ಯ ಸಂಸ್ಕೃತಿಯ ವಿಪರೀತ ಪ್ರಭಾವದಿಂದ ನೈತಿಕತೆ ಕುಸಿಯುತ್ತಿದೆ. ಭಾರತದ ಸಂಸ್ಕೃತಿ ಮಹಿಳೆಯರನ್ನು ಗೌರವಿಸುತ್ತದೆ. ನಮ್ಮ ಮೂಲಸಂಸ್ಕೃತಿ ಮತ್ತು ಸಂಪ್ರದಾಯಗಳಿಂದ ದೂರ ಸರಿಯುತ್ತ ಹೋದಾಗ ಅತ್ಯಾಚಾರಗಳಂತಹ ಘೋರ ಕೃತ್ಯಗಳು ಹೆಚ್ಚಾಗುತ್ತವೆ' ಎಂಬ ಭಾಗವತ್‌ರ ಮೂಲ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗಿದೆ".

## ಕ್ಷಮೆ ಯಾಚಿಸಿದ ಮಾಧ್ಯಮಗಳು

'ಭಾಗವತ್‌ರು ಮಹಿಳೆಯರ ಬಗ್ಗೆ ಅವಮಾನಕಾರಿ ಮಾತನಾಡಿದ್ದರು ಎಂದು ತಪ್ಪಾಗಿ ತಿಳಿದುಕೊಂಡಿದ್ದೆ. Sorry to Bhagwatji.'

**– ಸಾಗರಿಕಾ ಘೋಷ್**
**CNN-IBN ಆಂಗ್ಲವಾಹಿನಿಯ ಪ್ರಧಾನ ಸಂಪಾದಕಿ**

'ಬೇಷರತ್ ಕ್ಷಮೆ ಯಾಚಿಸುತ್ತೇವೆ. ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ ಭಾರತೀಯ ವಿವಾಹ ವ್ಯವಸ್ಥೆಯ ಕುರಿತು ಮಾತನಾಡುತ್ತಿರಲಿಲ್ಲ. ಏಷಿಯನ್ ನ್ಯೂಸ್ ಇಂಟರ್‌ನ್ಯಾಷನಲ್ (ANI) ಭಾಗವತ್ ಬಗ್ಗೆ ಕಳುಹಿಸಿದ ವರದಿ ಉದ್ದೇಶಪೂರ್ವಕವಾಗಿ ಎಡಿಟ್ ಮಾಡಲಾಗಿತ್ತು ಮತ್ತು ಸುದ್ದಿಯ ಮೂಲದಲ್ಲೇ ಪ್ರಮಾದವಿದೆ ಎಂಬುದನ್ನು ಗಮನಿಸಿದ್ದೇವೆ. ತಪ್ಪು ಮಾಡಿದ ವರದಿಗಾರನ ಮೇಲೆ ANI ಈಗಾಗಲೇ ಕ್ರಮಕೈಗೊಂಡಿದೆ. ಪತ್ರಿಕೋದ್ಯಮದ ಮೊದಲ ನಿಯಮವನ್ನು (ತಪ್ಪು ವರದಿ ಕೊಟ್ಟದ್ದಕ್ಕೆ) ಉಲ್ಲಂಘಿಸಿದ್ದಕ್ಕೆ ನಾನು ಕ್ಷಮೆ ಯಾಚಿಸುತ್ತಿದ್ದೇನೆ.'

**– ಪಿರ್ರೆ ಫಿಟ್ಟರ್, 'ಇಂಡಿಯಾ ಟುಡೇ' ಸಮೂಹದ ಮುಖ್ಯ ಪತ್ರಕರ್ತ.**

'ಮೋಹನ್ ಭಾಗವತ್ ಭಾಷಣದ ತುಣುಕನ್ನು ಎಡಿಟ್ ಮಾಡಿದ ಮತ್ತು ಭಾಷಣದ ಕೇವಲ ಒಂದು ಅಂಶವನ್ನು ಮಾತ್ರ (ಸಂದೇಹ ಬರುವಂತೆ) ವರದಿ ಮಾಡಿದ ನಮ್ಮ ವರದಿಗಾರನ ಮೇಲೆ ಕ್ರಮ ಕೈಗೊಂಡಿದ್ದೇವೆ.'

**– ಸ್ಮಿತಾ ಪ್ರಕಾಶ್, ANI ಸುದ್ದಿಸಂಸ್ಥೆಯ ವಾರ್ತಾವಿಭಾಗದ ಪ್ರಧಾನ ಸಂಪಾದಕಿ**

'ಮೋಹನ್ ಭಾಗವತ್‌ರ ಹೇಳಿಕೆಗಳನ್ನು ಮಾಧ್ಯಮಗಳು ವ್ಯವಸ್ಥಿತವಾಗಿ ತಿರುಚಿವೆ. ಇದು ತಪ್ಪು ಮತ್ತು ಮುಜುಗರ ತರಿಸುವ ಸಂಗತಿ.'

**– ಶಿವ್ ಆರೂರ್, 'ಹೆಡ್‌ಲೈನ್ಸ್ ಟುಡೇ' ಆಂಗ್ಲ ವಾರ್ತಾವಾಹಿನಿಯ ಪ್ರಧಾನ ವರದಿಗಾರ.**

## ಮೋಹನ್‌ಜೀ ಭಾಗವತ್ ಇಂದೋರ್‌ನಲ್ಲಿ ಹೇಳಿದ್ದೇನು?

### ಪಾಶ್ಚಾತ್ಯ ಸಮಾಜ ವಿಚಾರ ಒಡಕಿಗೆ ದಾರಿ:

❛ಕಳೆದ 300 ವರ್ಷಗಳಲ್ಲಿ ಮನುಷ್ಯನು ತನ್ನ ವಿಚಾರಗಳ ಅಹಂಕಾರದಿಂದ ಯೋಚಿಸುತ್ತ ಹೋದ, ತಾನು ಹೇಳುವುದೇ ಸತ್ಯವೆಂದು ನಂಬುತ್ತ ಹೋದ. ಅವನ ಅಹಂಕಾರ ಅದೆಷ್ಟು ಬೆಳೆಯಿತೆಂದರೆ, ದೇವರು ಇರುವುದೇ ಆದಲ್ಲಿ ಆತ ತನ್ನ ಟೆಸ್ಟ್‌ಟ್ಯೂಬ್‌ನಲ್ಲಿ ಉಪಸ್ಥಿತನಾಗಬೇಕಾದೀತು, ಆಗಲೇ ನಂಬುವೆ ಎಂದು ಆತ ಹೇಳಿದ.

ಅಂತಹ ಪರಿಸ್ಥಿತಿ ಉದ್ಭವಿಸಿದಾಗ, ಜಗತ್ತು, ಆತ್ಮ-ಪರಮಾತ್ಮ ಎಂಬುದೆಲ್ಲ ಅರ್ಥವಿಲ್ಲದು ಮಾತು, ಎಲ್ಲವೂ ಜಡವಸ್ತುವಿನ ಆಟ ಎಂಬ ವಿಚಾರ ಮೂಡಿಬಂದಿತು. ಹಿಗ್ಸ್‌ಬೋಸೋನ್ ಎಂಬುದು ಕಣಗಳಿಗೆ ವಸ್ತುಮಾನ ನೀಡುತ್ತದೆ, ಆ ಮೇಲೆ ಈ ಕಣಗಳು ಪರಸ್ಪರ ಡಿಕ್ಕಿ ಹೊಡೆಯುತ್ತವೆ, ಕೆಲವು ಕೂಡಿಕೊಳ್ಳುತ್ತವೆ, ಕೆಲವು ಚದರಿ ಹೋಗುತ್ತವೆ, ಅದರಿಂದ ಇಂಧನವೂ ಉತ್ಪನ್ನವಾಗುತ್ತದೆ ಮತ್ತು ಪದಾರ್ಥಗಳೂ ಉತ್ಪನ್ನವಾಗುತ್ತವೆ. ಇದರ ನಿಯಮಗಳೂ ಏನಿಲ್ಲ, ಸಂಬಂಧಗಳೂ ಏನಿಲ್ಲ. ಒಂದು ಕಣವು ಇನ್ನೊಂದು ಕಣದೊಂದಿಗೆ ಯಾವ ಸಂಬಂಧವನ್ನೂ ಹೊಂದಿಲ್ಲ. ಈ ಸೃಷ್ಟಿಯಲ್ಲಿ ಯಾರಿಗೂ ಯಾರೊಡನೆಯೂ ಸಂಬಂಧವಿರುವುದಿಲ್ಲ. ಎಲ್ಲವೂ ಸ್ವಾರ್ಥವೇ ಆಗಿದ್ದು, ಇದೊಂದು ವ್ಯಾಪಾರ – theory of contract, theory of social contract. ಪತ್ನಿಯೊಂದಿಗೆ ಪತಿಯ ವ್ಯಾಪಾರೀ ಸಂಬಂಧ ನಿಶ್ಚಿತವಾಗಿದೆ. ಇದನ್ನು ನೀವು ನನ್ನ ಮನೆಯನ್ನು ಸಂಭಾಳಿಸು, ನನಗೆ ಸುಖ ನೀಡು, ನಾನು ನಿನ್ನ ಪೋಷಣೆಯ ವ್ಯವಸ್ಥೆ ಮಾಡುವೆ, ನಿನ್ನನ್ನು ಸುರಕ್ಷಿತವಾಗಿಡುವೆ, ಎಂಬ ಸ್ವರೂಪ ಅದರದು. ಹೀಗೆ ಅದು ನಡೆಯುತ್ತಿದ್ದು, ಪತ್ನಿಯು ಸರಿಯಾಗಿರುವವರೆಗೆ ಪತಿಯು ಗುತ್ತಿಗೆಯ ರೂಪದಲ್ಲಿ ಅವಳನ್ನು ಇಟ್ಟುಕೊಳ್ಳುವನು. ಪತ್ನಿಯು ಗುತ್ತಿಗೆಯನ್ನು ಪೂರ್ಣಗೊಳಿಸಲು ಸಾಧ್ಯವಿಲ್ಲದಿದ್ದರೆ ಅವಳನ್ನು ತ್ಯಜಿಸುವನು. ಯಾವ ಕಾರಣಕ್ಕೂ ಪತಿಯೂ ಗುತ್ತಿಗೆಯನ್ನು ಪೂರ್ಣಗೊಳಿಸದಿದ್ದರೆ ಅವನನ್ನು ಪತ್ನಿಯು ತ್ಯಜಿಸುವಳು. ಗುತ್ತಿಗೆ ಮಾಡುವ ಇತರರನ್ನು ಹುಡುಕುವರು. ಹೀಗೆಯೇ ಎಲ್ಲ ವಿಷಯಗಳಲ್ಲೂ ವ್ಯಾಪಾರ ನಡೆಯುತ್ತಿದ್ದು, ತಮ್ಮ ವಿನಾಶದ ಭಯದಿಂದ ಇತರರನ್ನು ರಕ್ಷಿಸುತ್ತಾರೆ. (ಪಾಶ್ಚಿಮಾತ್ಯ ವ್ಯವಸ್ಥೆಯ ಕುರಿತು ಹೇಳಿದ್ದು).

ಪರ್ಯಾವರಣವನ್ನು ಶುದ್ಧವಾಗಿಡಿ, ಇಲ್ಲದಿದ್ದರೆ ಏನಾದೀತು? ಮನುಷ್ಯರ ವಿನಾಶವಾದೀತು. ಮನುಷ್ಯರ ವಿನಾಶವಾಗದಿದ್ದರೆ ಪರ್ಯಾವರಣದ ಬಗ್ಗೆ ಕಾಳಜಿಯಿಲ್ಲ. ಹೀಗಾಗಿ ಒಂದು ಕಡೆ ವೃಕ್ಷಾರೋಪಣದ ಕಾರ್ಯಕ್ರಮ ನಡೆಸುತ್ತಾರೆ. ಇನ್ನೊಂದು ಕಡೆ ಕಾರ್ಖಾನೆಗಳ ಕೊಳಕನ್ನು ನದಿಗೆ ಬಿಡುತ್ತಾರೆ. ಎರಡೂ ಕಾರ್ಯಗಳನ್ನೂ ಏಕಕಾಲಕ್ಕೆ ನಡೆಸುತ್ತಾರೆ.

ಸರ್ವೇ ಭದ್ರಾಣಿ ಪಶ್ಯಂತು ಎನ್ನುವುದೇಕೆ? ಹಾಗಿಲ್ಲದಿದ್ದರೆ ಬಹಳ ಸಂಹಾರ ನಡೆಯುವುದು, ಭಯದಿಂದ ಜನ ಸಾಯುವರು. ಭಯದ ವಿಧಾನ ಬಹಳ ಕಾಲ ನಡೆಯದು. ಇಷ್ಟೊಂದು ದೊಡ್ಡದಾದ ಸರ್ವಸಮರ್ಥನಾದ ರಶ್ಯಾ ಇತ್ತು, 70–72 ವರ್ಷಗಳವರೆಗೆ ಅದರ ಭಯದಿಂದ ಕೆಲಸವಾಯಿತು, ಅನಂತರ ಜನ ಭಯ ಬಿಟ್ಟುಬಿಟ್ಟರು. ಸತ್ತ ಕೋಳಿ ಬೆಂಕಿಗೆ ಏಕೆ ಹೆದರೀತು? ಆದ್ದರಿಂದ ಭಯದಿಂದ ಮೂಡಿಬಂದಿದ್ದ ವೈಭವದ ದೃಶ್ಯವು ಉಳಿಯಲಿಲ್ಲ.❜

(ಭಾಷಣದ ಆಯ್ದಭಾಗ)

## ಬೇಜವಾಬ್ದಾರಿ ನಡೆ ಮಾಧ್ಯಮಗಳದ್ದಲ್ಲವೇ?



- ಮೋಹನ್ ಭಾಗವತ್ ಅವರ ಪ್ರಕರಣ, ಭಾರತದ ಮಾಧ್ಯಮಗಳೂ ಕೂಡ ಅನೈತಿಕ ಮಾರ್ಗದಲ್ಲಿ ನಡೆಯುತ್ತಿವೆ ಎನ್ನುವುದನ್ನು ಇನ್ನೊಮ್ಮೆ ಸಾಬೀತು ಮಾಡಿದೆ. ಈಗ ಮಾಧ್ಯಮಗಳ 'ಹಾಲ್ ಆಫ್ ಶೇಮ್'ನಲ್ಲಿ ಹೊಸತಾಗಿ ಸೇರ್ಪಡೆಯಾಗಿರುವುದು ಏಷಿಯನ್ ನ್ಯೂಸ್ ಇಂಟರ್ನ್ಯಾಷನಲ್ (ಎಎನ್‌ಐ) ಸಂಸ್ಥೆ. ಮೋಹನ್ ಭಾಗವತ್‌ರ ಭಾಷಣವನ್ನು ತಿರುಚಿ, ತಾನು ತೋರಿಸಿದ್ದೇ ಭಾಗವತ್‌ರ ನೈಜ ದೃಷ್ಟಿಕೋನ ಎಂಬಂತೆ ಬಿಂಬಿಸಿಬಿಟ್ಟಿತು.
- ಸಹಜವಾಗಿಯೇ ನಿರೀಕ್ಷಿತ ಪರಿಣಾಮಗಳು ಎದುರಾದವು. ಇಂಗ್ಲಿಷ್ ಸುದ್ದಿವಾಹಿನಿಗಳೆಲ್ಲವೂ ಈ ಸುದ್ದಿಯನ್ನು ಹಿಡಿದುಕೊಂಡು ಹುಚ್ಚೆದ್ದು ಕುಣಿದವು. ಮೊದಲೇ ತಿರುಚಲಾಗಿದ್ದ ಸುದ್ದಿಯಲ್ಲಿ ಎನ್‌ಡಿಟಿವಿ ಎನ್ನುವ 'ತಿರುಚು ತಜ್ಞ' ಯಾವ ರೀತಿಯಲ್ಲಿ ಕೈಯಾಡಿಸಿತು ಎನ್ನುವುದಕ್ಕೆ ಇಲ್ಲೊಂದು ಚಿಕ್ಕ ಉದಾಹರಣೆ: 'ಮಹಿಳೆಯರು ಇರುವುದು ಮನೆಗೆಲಸ ಮಾಡುವುದಕ್ಕೆ': ಆರ್‌ಎಸ್‌ಎಸ್ ಮುಖಂಡನಿಂದ ಆಘಾತಕಾರಿ ಹೇಳಿಕೆ... ಬಲಪಂಥೀಯ ರಾಷ್ಟ್ರೀಯ ಸ್ವಯಂಸೇವಕ ಸಂಘದ ಮುಖ್ಯಸ್ಥ ಮೋಹನ್ ಭಾಗವತ್ ಮತ್ತೊಮ್ಮೆ ತಮ್ಮ ಹಳೆಚಾಳಿಯನ್ನು ಮುಂದುವರಿಸಿದ್ದಾರೆ!
- ಆದರೆ ಈ ಸುದ್ದಿಯನ್ನು ಹೇಗೆ ವರದಿ ಮಾಡಲಾಯಿತು ಮತ್ತು ಮಾಧ್ಯಮಗಳಲ್ಲಿ ಈ ಸುದ್ದಿ ಎಷ್ಟೊಂದು ವೇಗವಾಗಿ ಹರಿದಾಡತೊಡಗಿತು ಎನ್ನುವುದನ್ನೊಮ್ಮೆ ನೆನಪಿಸಿಕೊಳ್ಳಿ. ಅಲ್ಲದೆ ಮೋಹನ್ ಭಾಗವತ್‌ರ ಪರವಾಗಿ ಮಾತನಾಡಿದ ಆರ್‌ಎಸ್‌ಎಸ್‌ನ ವಕ್ತಾರ ರಾಮ್‌ಮಾಧವ್ ಹೇಳಿಕೆಯನ್ನು ಎಷ್ಟೊಂದು ಜಾಗ್ರತೆಯಿಂದ ಈ ಮಾಧ್ಯಮಗಳು ತಮ್ಮ ಸುಳ್ಳು ಸುದ್ದಿಯ ವಾಕ್ಯವೃಂದದಡಿಯಲ್ಲಿ ಹೂತುಹಾಕಿಬಿಟ್ಟವೋ ನೋಡಿ. 'ಉಗುಳಿ ಓಡಿಹೋಗುವ ಪತ್ರಿಕೋದ್ಯಮ' ಇಂತಹ ಕೆಲಸ ಮಾಡಿಕೊಂಡೇ ಬದುಕುಳಿದಿದೆ. ಆದರೆ ತಮ್ಮ ವಿರುದ್ಧ ಟ್ವಿಟರ್ ಮತ್ತು ಮತ್ತಿನ್ನಿತರ ಸಾಮಾಜಿಕ ಜಾಲತಾಣದಲ್ಲಿ ವಿರೋಧದ ಜ್ವಾಲಾಮುಖಿ ಏಳಲಿದೆ ಎನ್ನುವುದು ಮಾಧ್ಯಮ ಮಂದಿಗೆ ಗೊತ್ತಿರಲಿಲ್ಲ. ಸತ್ಯವೇನೆಂದರೆ ಈ ನ್ಯೂಸ್ ಚಾನೆಲ್ಲುಗಳಿಗೆ ನಿಯತ್ತೆಂಬುದೇ ಇಲ್ಲ. ಪರ್ವತದಷ್ಟು ಸಾಕ್ಷಿಯನ್ನು ನೀವು ಅವರೆದುರಿಗಿಡಿ, ಆದರೂ ಅವರ ಕಣ್ಣು ಅದನ್ನು ನಿರ್ಲಕ್ಷಿಸುತ್ತದೆ. ಆರ್‌ಎಸ್‌ಎಸ್‌ನ ವಿರುದ್ಧದ ಅವರ ದ್ವೇಷಕ್ಕೆ ಮುಖ್ಯ ಕಾರಣ ಮುಖ್ಯವಾಗಿ ಭಯ!
- ಆರ್‌ಎಸ್‌ಎಸ್ ಇದುವರೆಗೂ ಮಾಡಿಕೊಂಡು ಬಂದಿರುವ ಸಮಾಜಸೇವೆಗೆ ಮಾಧ್ಯಮಗಳು ಯಾವಾಗಲೂ ಜಾಣ ಕುರುಡು ಪ್ರದರ್ಶಿಸಿವೆ. ಆರ್‌ಎಸ್‌ಎಸ್ ಅಸ್ತಿತ್ವದಲ್ಲಿರುವುದೇ ಹಿಂಸಾಚಾರ ಹುಟ್ಟುಹಾಕಲು ಮತ್ತು ಅಲ್ಪಸಂಖ್ಯಾತರ ಎದೆಯಲ್ಲಿ ನಡುಕ ಹುಟ್ಟಿಸಲು ಎನ್ನುವಂತೆ ಅದನ್ನು ಬಿಂಬಿಸಲಾಗುತ್ತಿದೆ. ಆರ್‌ಎಸ್‌ಎಸ್ ದೇಶಕ್ಕೆ ಕೊಟ್ಟ ಕೊಡುಗೆಯ ಬಗ್ಗೆ ಮಾತ್ರ ಎಲ್ಲಿಯೂ ಚರ್ಚೆಯಾಗುವುದಿಲ್ಲ.
- ಯಾವುದೇ ನೈಸರ್ಗಿಕ ವಿಪತ್ತುಗಳ ಉದಾಹರಣೆಯನ್ನೇ ತೆಗೆದುಕೊಳ್ಳಿ. ನೆರೆ, ಬರ, ಭೂಕಂಪ, ಸುನಾಮಿ... ಯಾವುದೇ ಇರಲಿ, ಆರ್‌ಎಸ್‌ಎಸ್‌ನ ಸ್ವಯಂಸೇವಕರು ಆ ಸ್ಥಳಕ್ಕೆ ಎಲ್ಲರಿಗಿಂತ ಮುಂಚಿತವಾಗಿ ತಲುಪಿ ಕಷ್ಟದಲ್ಲಿರುವವರ ನೆರವಿಗೆ ಮುಂದಾಗುತ್ತಾರೆ. ಆ ಸಮಯದಲ್ಲಿ ಅವರು ತಮ್ಮ Comfort ಬಗ್ಗೆ ಯೋಚಿಸುವುದೇ ಇಲ್ಲ. ಆದರೆ ಮಾಧ್ಯಮಗಳು ಎಂದಾದರೂ ಈ ಕುರಿತು ವರದಿ ಮಾಡುತ್ತವೆಯೇ? ಇದು ಅವರ ಅಪ್ರಾಮಾಣಿಕತೆಯನ್ನು ತೋರಿಸುವುದಿಲ್ಲವೇ? ಆರ್‌ಎಸ್‌ಎಸ್‌ನ ಪ್ರಮುಖ ಶಕ್ತಿಯೆಂದರೆ ಅದರ ಸ್ವಯಂಸೇವಕರು. ಇವರುಗಳೆಲ್ಲಾ ದೇಶಕ್ಕಾಗಿ ಸ್ವಹಿತವನ್ನು ಮರೆತವರು. ಇವರುಗಳಲ್ಲಿ ಸಾವಿರಾರು ಕಾರ್ಯಕರ್ತರು ಆರಂಕಿಯ ಸಂಬಳ ಪಡೆಯುವಷ್ಟು ಅರ್ಹತೆ ಹೊಂದಿದ್ದರೂ ಕೊನೆಗೂ ಅವರು ಆಯ್ಕೆ ಮಾಡಿಕೊಂಡದ್ದು ದೇಶಸೇವೆಯನ್ನು.

> ❛ಆರೆಸ್ಸೆಸ್ಸನ್ನು ಪ್ರಶ್ನಿಸುವ ಹಕ್ಕು ಎಲ್ಲರಿಗೂ ಇದೆ. ಆದರೆ ಆ ಪ್ರಶ್ನೆಗಳು ಸತ್ಯ ಮತ್ತು ಪ್ರಾಮಾಣಿಕೆಯ ತಳಹದಿಯನ್ನು ಹೊಂದಿರಬೇಕು. ಆರೆಸ್ಸೆಸ್‌ನ ಸೈದ್ಧಾಂತಿಕ ಮತ್ತು ಬೌದ್ಧಿಕ ವೈಫಲ್ಯಗಳೇನೇ ಇದ್ದರೂ, ಅದರಂತಹ ನಿಸ್ವಾರ್ಥ ದೇಶಸೇವಾ ಮನೋಭಾವ ಪ್ರಪಂಚದಲ್ಲಿ ಯಾರಿಗೂ ಇರಲಿಕ್ಕಿಲ್ಲ. ಅದನ್ನು ಪ್ರಶ್ನಿಸುವುದಕ್ಕೆ ಸಾಧ್ಯವೂ ಇಲ್ಲ. ಹೊರಗಿನವನಾದ ನಾನೇ ಈ ಮಾತನ್ನು ಹೇಳುತ್ತಿದ್ದೇನೆ!❜

- ANI ಮತ್ತು ಅದೇ ಮನಸ್ಥಿತಿಯ ಸುದ್ದಿ ವಾಹಿನಿಗಳ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಈ ಪ್ರಮಾಣದಲ್ಲಿ ವಿರೋಧದ ಅಲೆಯೆದ್ದಿರುವುದು. ದೇಶಕ್ಕಾಗಿ ಜೀವನ ಮುಡಿಪಿಟ್ಟಿರುವ ಇಷ್ಟೊಂದು ಪ್ರಮಾಣದ ಜನರನ್ನು ಆರೆಸ್ಸೆಸ್‌ನಂತೆ ಪ್ರಪಂಚದ ಇನ್ನಾವುದೇ ಸಂಸ್ಥೆಗೆ ಹುಟ್ಟುಹಾಕಲು, ಬೆಸೆಯಲು ಸಾಧ್ಯವಾಗಿದೆಯೇ?! ಒಂದು ವೇಳೆ ಅದು ದುರ್ಬಲ ಸಂಘವಾಗಿದ್ದರೆ ಕಾಂಗ್ರೆಸ್ ಮತ್ತು ಕಮ್ಯುನಿಷ್ಟ್ ಸರ್ಕಾರಗಳ ನಿರಂತರ ದಾಳಿಗೆ ಮೆತ್ತಗಾಗಿ ಇಷ್ಟು ಹೊತ್ತಿಗಾಗಲೇ ನೆಲಕಚ್ಚಿರುತ್ತಿತ್ತು.
- ಆರೆಸ್ಸೆಸ್ಸನ್ನು ಉಗ್ರ ಸಂಸ್ಥೆಯಂತೆ ಬಿಂಬಿಸುತ್ತಿರುವ ಮಾಧ್ಯಮಮಂದಿಯ ವೈಯಕ್ತಿಕ ಜೀವನವನ್ನೇ ಒಮ್ಮೆ ನೋಡಿ. ಅಲ್ಲಿ ತುಂಬಿರುವುದು ಬರೀ ಕೊಳಕು ಮಾತ್ರ. ಕಾಂಗ್ರೆಸ್ ಪರ ಪ್ರಚಾರ ಮಾಡುವುದು, ಭೂ ಕಬಳಿಕೆ, ಮೋದಿಯನ್ನು ಕಿತ್ತೆಸೆಯಬೇಕೆಂದು ಪದೇ ಪದೇ ಬೊಬ್ಬಿಡುವುದು ಇವರುಗಳ ನೈತಿಕತೆ! ಅರ್ಧ ದಿನವಾದರೂ ಭಾಗವತ್‌ರಂತೆ ಇವರುಗಳಿಗೆ ಬದುಕಲು ಸಾಧ್ಯವೇ? ಆದರೂ ನೈತಿಕತೆಯ ಉತ್ತುಂಗವನ್ನು ತಲುಪಿದವರಂತೆ ವರ್ತಿಸುತ್ತಾ ಆರೆಸ್ಸೆಸ್ ಭಾಗವತ್‌ರನ್ನು ಹೀಗಳೆಯುತ್ತಾರೆ. ಇವರು ಯಾವ ಪ್ರಪಂಚದಲ್ಲಿ ಬದುಕುತ್ತಿದ್ದಾರೋ ತಿಳಿಯುತ್ತಿಲ್ಲ. ಅದಕ್ಕಿಂತ ಮುಖ್ಯವಾಗಿ ಇದನ್ನೆಲ್ಲಾ ಸಹಿಸಿಕೊಳ್ಳುತ್ತಾ ಕುಳಿತುಕೊಂಡಿದ್ದೇವಲ್ಲ, ನಾವ್ಯಾವ ದುಃಸ್ವಪ್ನದಲ್ಲಿ ಬದುಕುತ್ತಿದ್ದೇವೆಯೋ ತಿಳಿಯದು.

(ಜನವರಿ 10, 2013ರಂದು 'ಕನ್ನಡಪ್ರಭ'ದಲ್ಲಿ ಪ್ರಕಟವಾದ ಪತ್ರಕರ್ತ-ವಿಶ್ಲೇಷಕ ಸಂದೀಪ್ ಬಾಲಕೃಷ್ಣ ಅವರ ಲೇಖನದ ಆಯ್ದಭಾಗ)